**ಕರ್ನಾಟಕ ಸರ್ಕಾರ**
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಫ್ಲಾಟ್ ನಂ. 1,2,3,4, ಕೆ.ಎಸ್.ಐ.ಐ.ಡಿ.ಸಿ, ರಾಜಾಜಿನಗರ ಐಟಿ ಪಾರ್ಕ್
5ನೇ ಮಹಡಿ, ಸೌತ್ ಬ್ಲಾಕ್ಸ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-10
ದೂರವಾಣಿ ಸಂಖ್ಯೆ: 080-22372738, ಈ-ಮೇಲ್ :karnregshorti@gmail.com

ಆರ್‌ಡಿಸಿ-ಇಜಿಎಸ್/126/2021 ದಿನಾಂಕ: 13-02-2023

**ಜಂಟಿ ಸುತ್ತೋಲೆ**

**ವಿಷಯ:** ಮಹಾತ್ಮಗಾಂಧಿ ನರೇಗಾ ಯೋಜನೆಯ **"ಜಲಸಂಜೀವಿನಿ"** ಕಾರ್ಯಕ್ರಮದಡಿ ವನ್ಯಜೀವಿ ಉಪಯೋಜನೆಯನ್ನು ವಿವಿಧ ಅನುಷ್ಠಾನ ಇಲಾಖೆಗಳೊಂದಿಗೆ ಒಗ್ಗೂಡಿಸುವಿಕೆಯಡಿ ಅನುಷ್ಠಾನಿಸುವ ಕುರಿತು.

*********

ಮಹಾತ್ಮಗಾಂಧಿ ನರೇಗಾ ಯೋಜನೆಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಕಾಮಗಾರಿಗಳನ್ನು ಜಲಾನಯನ ಆಧರಿತ ದಿಬ್ಬದಿಂದ ಕಣಿವೆಯವರೆಗೆ ಉಪಚರಿಸುವ ಮಾದರಿಯಲ್ಲಿ ವೈಜ್ಞಾನಿಕವಾಗಿ ಅನುಷ್ಠಾನಗೊಳಿಸಲು ಪ್ರಸ್ತುತ ವರ್ಷದಿಂದ **"ಜಲಸಂಜೀವಿನಿ"** ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಜಲಸಂಜೀವಿನ ಅನುಷ್ಠಾನದ ಭಾಗವಾಗಿ ವಿವಿಧ ಉಪಯೋಜನೆಗಳನ್ನು ಅಳವಡಿಸಲಾಗಿದ್ದು, ಅವುಗಳಲ್ಲಿ ಗೋಮಾಳ ಅಭಿವೃದ್ಧಿ, ವಿಪತ್ತು ನಿರ್ವಹಣೆ ಮತ್ತು ವನ್ಯಜೀವಿ ಉಪಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ನರೇಗಾ ಯೋಜನೆಯಡಿ ಈಗಾಗಲೆ ಸಾಮಾಜಿಕ ಅರಣ್ಯ ಮತ್ತು ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ಅನೇಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಅರಣ್ಯದ ಗಿರಿಕಂದರ, ಇಳಿಜಾರು ಪ್ರದೇಶದಲ್ಲಿ ಬೆಳೆಯುವ ಹುಲ್ಲು ಬಹುತೇಕ ಪ್ರಾಣಿಗಳಿಗೆ ಆಹಾರದ ಮೂಲವಾಗಿದೆ. ಋತುಮಾನಕ್ಕೆ ಅನುಗುಣವಾಗಿ ಪ್ರಾಣಿಗಳು ನೀರು, ನೆರಳು ಮತ್ತು ಆಹಾರಕ್ಕಾಗಿ ಕಾಡಿನಿಂದ ಕಾಡಿಗೆ ಸಂಚರಿಸುವುದು ಕಾಡು ಪ್ರಾಣಿಗಳ ಕ್ರಮಬದ್ಧ ಜೀವನ ಶೈಲಿಯಾಗಿರುತ್ತದೆ. ಆದರೆ ಕಾಡಿನಲ್ಲಿ ಮೇವಿನ ಕೊರತೆ, ವಿವಿಧ ಕಳೆಗಳಾದ ಲ್ಯಾಂಟನ ಮತ್ತು ಇಪಟೋರಿಯಂ ಪ್ರಭಾವದಿಂದ ಕಾಡು ಪ್ರಾಣಿಗಳ ಸ್ಥಳೀಯ ಆಹಾರ ಲಭ್ಯತೆ ವ್ಯತ್ಯಾಸವಾಗಿ ಕಾಡು ಪ್ರಾಣಿಗಳು ಕಾಡಿನಂಚಿನಲ್ಲಿರುವ ಕೃಷಿ ಭೂಮಿಗೆ ಲಗ್ಗೆ ಇಡುವುದು ಕಂಡುಬಂದಿದೆ. ಇದರಿಂದ ಬಲಿ ಪ್ರಾಣಿಗಳ (Herbivores) ಸಂದ್ರತೆ ಕಡಿಮೆಯಾಗಿ ಇವುಗಳನ್ನು ತಿಂದು ಬದುಕುವ ಮಾಂಸ ಆಹಾರ ಪ್ರಾಣಿಗಳ (Carnivores) ಆಹಾರದ ಸರಪಣಿ ತುಂಡಾಗಿದೆ. ಇದರಿಂದಾಗಿ ಕಾಡಿನಂಚಿನಲ್ಲಿ ಗ್ರಾಮಗಳಲ್ಲಿ ಮಾನವ ಮತ್ತು ಕಾಡು ಪ್ರಾಣಿಗಳ ಸಂಘರ್ಷ ನಿರಂತರವಾಗಿರುವುದು ಕಂಡು ಬಂದಿರುತ್ತದೆ.

ಈ ನಿಟ್ಟಿನಲ್ಲಿ **ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಅರಣ್ಯ ಇಲಾಖೆಗಳ** ಜಂಟಿ ಸಹಯೋಗದೊಂದಿಗೆ 2023-24 ರಿಂದ ಅಭಿಯಾನ ರೂಪದಲ್ಲಿ (Mission Mode) ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ **"ಜಲಸಂಜೀವಿನಿ"** ಕಾರ್ಯಕ್ರಮದಲ್ಲಿ ಒಗ್ಗೂಡಿಸುವಿಕೆಯಡಿ ವನ್ಯಜೀವಿ ವಲಯವನ್ನು ಅಭಿವೃದ್ಧಿಪಡಿಸಲು **"ವನ್ಯಜೀವಿ ಉಪಯೋಜನೆ"** ಯನ್ನು ಹಮ್ಮಿಕೊಂಡಿದ್ದು, ಮಣ್ಣು ಮತ್ತು ನೀರಿನ ಸಂರಕ್ಷಣೆ ಕಾಮಗಾರಿಗಳನ್ನು ಕೈಗೊಳ್ಳುವ ಜೊತೆಗೆ ಈ ಕೆಳಕಂಡ ಬಹುವಾರ್ಷಿಕ ಮೇವು ಬೆಳೆಯಲು ಅವಕಾಶ ಕಲ್ಪಿಸಲಾಗಿದೆ.

ವನ್ಯಜೀವಿ ವಲಯದಲ್ಲಿ ಯೋಜನೆಯಡಿ ಪ್ರಮುಖವಾಗಿ ನರೇಗಾ ಯೋಜನೆಯ ವಾರ್ಷಿಕ ಪ್ರಧಾನ ಸುತ್ತೋಲೆ 2021-22 ರ ಕಂಡಿಕೆ 7.6.11 ರಂತೆ ಹುಲ್ಲುಗಾವಲು ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಮಣ್ಣು ಮತ್ತು ನೀರಿನ ಸಂರಕ್ಷಣೆ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ವನ್ಯಜೀವಿ ವಲಯಗಳಲ್ಲಿ ಲಂಟಾನ ಗಿಡಗಳ ವಿಸ್ತರಣೆಯಿಂದ ಪ್ರಾಣಿಗಳಿಗೆ ಮೇವಿನ ಕೊರತೆ ಉಂಟಾಗುತ್ತಿದ್ದು, ಇವುಗಳನ್ನು ಬುಡಸಮೇತ ತೆಗೆದು ಹುಲ್ಲುಗಾವಲು ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಮೂಲಕ ವನ್ಯಜೀವಿ ವಲಯಗಳಲ್ಲಿ ಪ್ರಾಣಿಗಳಿಗೆ ಅಗತ್ಯವಿರುವ ಮೇವು ದೊರಕುವಂತೆ ಕ್ರಮ ವಹಿಸಲಾಗುವುದು. ಈ ವಲಯಗಳಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಪ್ರಾಣಿ-ಪಕ್ಷಿಗಳಿಗೆ ಅಗತ್ಯವಿರುವ ಜಲತಾಣಗಳು ಮತ್ತು ಹುಲ್ಲುಗಾವಲು ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಸಹಕಾರಿಯಾಗುತ್ತದೆ. ವನ್ಯಜೀವಿ ವಲಯಗಳ ಆಸುಪಾಸುಗಳ ಹಾಡಿಗಳು ಮತ್ತು ಕಾಡಿನಂಚಿನಲ್ಲಿರುವ ಗ್ರಾಮಗಳಲ್ಲಿ ವಾಸಿಸುತ್ತಿರುವ ಜನರಿಗೆ ನರೇಗಾ ಯೋಜನೆಯಡಿ ಕೆಲಸ ನೀಡುವುದರಿಂದ ಅವರ ಜೀವನೋಪಾಯ ಅವಕಾಶಗಳನ್ನು ಸುಧಾರಿಸುವುದರೊಂದಿಗೆ ಮಾನವ ಮತ್ತು ಕಾಡು ಪ್ರಾಣಿಗಳ ಸಂಘರ್ಷ ತಡೆಯಲು ಅವಕಾಶ ಕಲ್ಪಿಸಿದಂತಾಗುತ್ತದೆ.

## Important Fodder Trees

| Sl. No. | Common / English Name | Scientific name | Commonly grown area's |
|---|---|---|---|
| 1 | Subabool | *Leucaena leucocephala* | Sub humid, Semiarid |
| 2 | Gliricidia | *Gliricidia sepium* | Humid, sub humid |
| 3 | Ardu | *Alianthus excelsa* | Arid and semiarid regions |
| 4 | Agasthi/Agase | *Sesbania grandiflora* | Arid and semiarid regions |
| 5 | Shevri | *Sesbania sesban* | Arid and semiarid regions |
| 6 | Khejri | *Prosopis cinereria* | Arid and semiarid regions |
| 7 | Mahua | *Bassia latifolia - Flower* | Semi arid |
| 8 | Babul/Karijali | *Acacia nilotica* | Dry and moist tropics |
| 9 | Neem | *Azadirachtaindica* | Dry and moist tropics |
| 10 | Kachnar | *Bauhinia variegata* | Sub tropics, moist and dry tropics |
| 11 | Safedsiris | *Albizia procera* | Wet tropical and subtropical |
| 12 | Lallei | *Albizia amara* | Dry tropics |
| 13 | Siris | *Albizia lebbeck* | Moist and dry tropics |

| | | | |
|---|---|---|---|
| 14 | Shisham | *Dalbergia sissoo* | Moist tropics |
| 15 | Mulbery | *Morus alba* | Moist tropics |
| 16 | Bola | *Morus laevigata* | Subtropics |
| 17 | Drum stick | *Moring aoleifera* | Moist tropics, sub humid Humid |
| 18 | Kikkar | *Prosopis chilensis* | Dry tropics |
| 19 | Ber | *Ziziphus mauritiana* | Dry and moist tropics |
| 20 | Kamra | *Hardwickia binata* | Dry and moist tropics |
| 21 | Hebbevu | *Milia dubia* | Dry and moist tropics |

## ವಿವಿಧ ಪ್ರದೇಶಗಳಲ್ಲಿ ಬೆಳೆಯಬಹುದಾದದ ಬಹುವಾರ್ಷಿಕ ಹುಲ್ಲಿನ ಬೆಳೆಗಳು:

| SL.No | Growing conditions | Suitable crops |
|---|---|---|
| 1 | Assured irrigation | Bajranapier hybrid<br>Guinea grass |
| 2 | Rainfed/Dryland conditions | Signal grass<br>Rhodes grass |
| 3 | Miscellaneous conditions | **Water logged conditions:**<br>Paragrass<br>**Saline/alkali soils:**<br>Rhode grass<br>**High rainfall area (>2500mm)**<br>Nandigrass<br>**Shaded conditions (in plantation crops):**<br>Guinea grass<br>**Eroded soils and undulated conditions:**<br>Grazing guinea<br>Signal grass |

### 1. ಕ್ರಿಯಾ ಯೋಜನೆ ಸಿದ್ಧಪಡಿಸುವಿಕೆ:

ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅರಣ್ಯ ಇಲಾಖೆಯು ಸ್ಥಳ ಸಮೀಕ್ಷೆ ಕೈಗೊಂಡು ವೈಜ್ಞಾನಿಕವಾಗಿ ದೂರ ಸಂವೇದಿ ಹಾಗೂ ಭೌಗೋಳಿಕ ಮಾಹಿತಿ ವ್ಯವಸ್ಥೆ ತಂತ್ರಜ್ಞಾನದೊಂದಿಗೆ ಜಲಾನಯನ ಪರಿಕಲ್ಪನೆಯಡಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ, ನಿಯಮಾನುಸಾರ ಗ್ರಾಮ ಸಭೆಗಳಲ್ಲಿ ಮಂಡಿಸಿ, ಜಿಲ್ಲಾ ಪಂಚಾಯತಿಯಿಂದ ಅನುಮೋದನೆ ಪಡೆದು ಹಂತ ಹಂತವಾಗಿ ಅನುಷ್ಠಾನಿಸುವುದು.

### 2. ಅನುಷ್ಠಾನ ಕ್ರಮಗಳು ಮತ್ತು ಅನುಷ್ಠಾನ ಇಲಾಖೆಯ ಜವಾಬ್ದಾರಿಗಳು:

ವನ್ಯಜೀವಿ ಉಪಯೋಜನೆಯನ್ನು **"ಜಲಸಂಜೀವಿನಿ"** ಕಾರ್ಯಕ್ರಮದ ಒಗ್ಗೂಡಿಸುವಿಕೆಯಡಿ ಅನುಷ್ಠಾನಗೊಳಿಸಲು ವಿವಿಧ ಅನುಷ್ಠಾನ ಇಲಾಖೆಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ

a. <u>ಗ್ರಾಮೀಣಾಭಿವೃದ್ಧಿ ಇಲಾಖೆ:</u>

- ನರೇಗಾ ಯೋಜನೆಯಡಿ ಮಾರ್ಗಸೂಚಿಯಂತೆ ವೈಜ್ಞಾನಿಕವಾಗಿ ಕ್ರಿಯಾ ಯೋಜನೆಯನ್ನು ನಿಗದಿತ ಅವಧಿಯಲ್ಲಿ ಅನುಮೋದಿಸುವುದು.
- ವನ್ಯಜೀವಿ ಉಪಯೋಜನೆಯ ಪ್ರದೇಶ ಅಭಿವೃದ್ಧಿಗೆ ಪೂರಕವಾಗಿ ಸೂಕ್ತ ತಾಂತ್ರಿಕ ತರಬೇತಿಯನ್ನು ತಾಂತ್ರಿಕ ಇಲಾಖೆಗಳ ಸಹಯೋಗದೊಂದಿಗೆ ಆಯೋಜಿಸಲು ಸಹಕಾರಿಸುವುದು.
- ವನ್ಯಜೀವಿ ವಲಯಗಳ ಆಸುಪಾಸು ಹಾಡಿಗಳು ಮತ್ತು ಕಾಡಿನಂಚಿನಲ್ಲಿರುವ ಗ್ರಾಮಗಳಲ್ಲಿ ಯೋಜನೆಯಡಿ ಅನುಮತಿಸಲ್ಪಟ್ಟ ಅಗತ್ಯ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳುವುದು.
- ಸದರಿ ಮಹತ್ವಾಕಾಂಕ್ಷಿ ಕಾರ್ಯಕ್ರಮದ ಅನುಷ್ಠಾನಕ್ಕೆ ತಾಲ್ಲೂಕು ಮಟ್ಟದಲ್ಲಿ ಸಮನ್ವಯ ಅಧಿಕಾರಿಯಾಗಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾರ್ಯನಿರ್ವಹಿಸುವುದು.
- ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ ಜಿಲ್ಲಾ ಮಟ್ಟದಲ್ಲಿ ಜಂಟಿ ನೋಡಲ್ ಅಧಿಕಾರಿಯಾಗಿ ಉಪಅರಣ್ಯ ಸಂರಕ್ಷಣಾಧಿಕಾರಿ(ವನ್ಯ ಜೀವಿ/ಸಾಮಾಜಿಕ/ಪ್ರಾದೇಶಿಕ) ರವರೊಂದಿಗೆ ಕಾರ್ಯನಿರ್ವಹಿಸುವುದು.

b. <u>ಅರಣ್ಯ ಇಲಾಖೆ:</u>

- ಅರಣ್ಯ ಇಲಾಖೆಯ ಮಾರ್ಗಸೂಚಿ, ಸುತ್ತೋಲೆ ಹಾಗೂ ವನ್ಯಜೀವಿಗಳ ಸಂರಕ್ಷಣೆಯ ನಿಯಮಗಳಿಗೆ ಒಳಪಟ್ಟು ನರೇಗಾ ಯೋಜನೆಯಡಿ ಅನುಮತಿಸಿದ ಕಾಮಗಾರಿಗಳನ್ನು ಗುರುತಿಸಿ ಅನುಷ್ಠಾನಿಸುವುದು. (ಅನುಬಂಧದಲ್ಲಿ ಲಗತ್ತಿಸಿದೆ)
- ನರೇಗಾ ಯೋಜನೆಯಡಿ ವನ್ಯಜೀವಿ ಉಪಯೋಜನೆಯ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಿಸಲು ಅನುಷ್ಠಾನ ಇಲಾಖೆಯಾಗಿ ಕಾರ್ಯನಿರ್ವಹಿಸುವುದು.
- ಅರಣ್ಯ ಇಲಾಖೆಯು ಸ್ಥಳ ಸಮೀಕ್ಷೆ ಕೈಗೊಂಡು ವೈಜ್ಞಾನಿಕವಾಗಿ ದೂರು ಸಂವೇದಿ ಹಾಗೂ ಭೌಗೋಳಿಕ ಮಾಹಿತಿ ವ್ಯವಸ್ಥೆ ತಂತ್ರಜ್ಞಾನದೊಂದಿಗೆ ಜಲಾನಯನ ಪರಿಕಲ್ಪನೆಯಡಿ ಕ್ರಿಯಾ ಯೋಜನೆಯನ್ನು ರೂಪಿಸಿಕೊಂಡು ಅನುಷ್ಠಾನಿಸುವುದು
- ಉಪಅರಣ್ಯ ಸಂರಕ್ಷಣಾಧಿಕಾರಿ (ವನ್ಯ ಜೀವಿ/ಸಾಮಾಜಿಕ/ಪ್ರಾದೇಶಿಕ) ರವರು ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.
- ವನ್ಯಜೀವಿ ಉಪಯೋಜನೆಯ ಕಾರ್ಯಕ್ರಮ ಅನುಷ್ಠಾನಕ್ಕೆ ಅವಶ್ಯವಿರುವ ಮೇವಿನ ಸಸಿ, ಮೇವಿನ ಗಿಡಗಳ ಉತ್ಪಾದನೆಯನ್ನು ನರ್ಸರಿಗಳಲ್ಲಿ ಉತ್ಪಾದಿಸಲು ಅಗತ್ಯ ಕ್ರಮ ಕೈಗೊಳ್ಳಲುವುದು.
- ಅರಣ್ಯ ಇಲಾಖೆಯ ವಿವಿಧ ಹಂತದ ಅಧಿಕಾರಿಗಳು ಸದರಿ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕೆ ನಿರಂತರ ಮೇಲ್ವಿಚಾರಣೆ, ನಿಯಮಿತ ಪರಿಶೀಲನೆ ಹಾಗೂ ಅಗತ್ಯ ತಾಂತ್ರಿಕ ಮಾರ್ಗದರ್ಶನ ನೀಡುವುದು.

3. **<u>ತಾಂತ್ರಿಕ ಅಂದಾಜು ಪಟ್ಟಿಗಳನ್ನು ತಯಾರಿಕೆ:</u>**

ತಾಂತ್ರಿಕ ಅಂದಾಜು ಪಟ್ಟಿಗಳನ್ನು ತಯಾರಿಸಲು ನರೇಗಾ ವಾರ್ಷಿಕ ಪ್ರಧಾನ ಸುತ್ತೋಲೆ ಪ್ರಕಾರ, ನರೇಗಾ ಅನುಮೋದಿತ ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಲು ಕ್ರಮವಹಿಸುವುದು.

4. **<u>ಅನುದಾನ:</u>**

ಸದರಿ ಕಾರ್ಯಕ್ರಮದ ಅನುಷ್ಠಾನಕ್ಕೆ ಅವಶ್ಯಕ ಅನುದಾನವನ್ನು **ನರೇಗಾ ಯೋಜನೆಯ ಕೂಲಿ ಮತ್ತು ಸಾಮಗ್ರಿ ವೆಚ್ಚದ ಅನುದಾನದಲ್ಲಿ** ಮಾರ್ಗಸೂಚಿಯಂತೆ ಶೇ. 60:40 ಅನುಪಾತದಲ್ಲಿ ಬಳಸಿಕೊಂಡು ಅನುಷ್ಠಾನಿಸುವುದು.

5. **<u>ದಾಖಲೀಕರಣ:</u>**

ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನ ಪೂರ್ವದಲ್ಲಿಯ ವಾಸ್ತವ ಸ್ಥಿತಿ ಹಾಗೂ ಅನುಷ್ಠಾನ ಹಂತದ ಚಟುವಟಿಕೆಗಳ ಪ್ರಗತಿ, ಅಭಿವೃದ್ಧಿ ಇತ್ಯಾದಿಗಳ ದಾಖಲೀಕರಣವನ್ನು ಮಾಡುವುದು. ಇದಕ್ಕೆ ತಗಲುವ ವೆಚ್ಚಗಳನ್ನು ನರೇಗಾ ಯೋಜನೆಯ IEC ಚಟುವಟಿಕೆಗಳಡಿ ಭರಿಸುವುದು.

13/02/23

ಆಯುಕ್ತರು,
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

14/2

ಪ್ರಧಾನ ಮುಖ್ಯ ಅರಣ್ಯ
ಸಂರಕ್ಷಣಾಧಿಕಾರಿಗಳು (ವನ್ಯ ಜೀವಿ) ಮತ್ತು
ಮುಖ್ಯ ವನ್ಯ ಜೀವಿ ಪರಿಪಾಲಕರು

**<u>ಪ್ರತಿ ಮಾಹಿತಿಗಾಗಿ:</u>**

1. ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳಿಗೆ.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯ ಜೀವಿ) ಮತ್ತು ಮುಖ್ಯ ವನ್ಯ ಜೀವಿ ಪರಿಪಾಲಕರು, 2ನೇ ಮಹಡಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳಿಗೆ.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ (ಸಾಮಾಜಿಕ ಅರಣ್ಯ ಮತ್ತು ಯೋಜನೆಗಳು) ಅರಣ್ಯ ಭವನ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳಿಗೆ.
4. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ (ವನ್ಯ ಜೀವಿ) ಅರಣ್ಯ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳಿಗೆ.
5. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ರವರ ಮಾಹಿತಿಗಾಗಿ.
6. ರಾಜ್ಯ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
7. ರಾಜ್ಯದ ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ, ಪ್ರಾದೇಶಿಕ ಅರಣ್ಯ, ವನ್ಯ ಜೀವಿ.

"Annexure"

| Permissible List of Work under Mahatma Gandhi NREGA TO BE TAKEN BY FOREST DEPARMENT | | | | |
|---|---|---|---|---|
| **S. No.** | **Works** | **NRM/Non NRM** | **NRM subcatego** | **Water Related** |
| 1 | Construction of Earthen contour Bund for Community | NRM | SWC | |
| 2 | Construction of Pebble contour Bund for Community | NRM | SWC | |
| 3 | Construction of Stone contour Bund for Community | NRM | SWC | |
| 4 | Construction of Earthen graded Bund for Community | NRM | SWC | |
| 5 | Construction of Pebble graded Bund for Community | NRM | SWC | |
| 6 | Construction of Stone graded Bund for Community | NRM | SWC | |
| 7 | Development of Silvipasture Grasssland for Community | NRM | LR | |
| 8 | Levelling/shaping of Wasteland Land for Community | NRM | LR | |
| 9 | Construction of Brushwood Check Dam for Community | NRM | SWC | Water |
| 10 | Construction of Earthen Check Dam for Community | NRM | SWC | Water |
| 11 | Construction of Boulder Check Dam for Community | NRM | SWC | Water |
| 12 | Construction of Masonry/CC Check Dam for Community | NRM | SWC | Water |
| 13 | Construction of Gabion Check Dam for Community | NRM | SWC | Water |
| 14 | Construction of Culvert / cross drainage structures for Community | Non-NRM | | |
| 15 | Construction of Diversion Storm Water Drain for Community | NRM | SWC | Water |
| 16 | Boundary Line Plantation of Farm Forestry Trees for Community | NRM | PLNT | |
| 17 | Canal Line Plantation of Forestry Trees for Community | NRM | PLNT | |
| 18 | Boundary Line Plantation of Forestry Trees for Community | NRM | PLNT | |

| | | | | |
|---|---|---|---|---|
| 19 | Road side line plantation of Forestry Trees for Community | NRM | PLNT | |
| 20 | Along the coast Line Plantation of Forestry Trees for Community | NRM | PLNT | |
| 21 | Boundary Line Plantation of Shelter Belt Trees for Community | NRM | PLNT | |
| 22 | Road Line Plantation of Shelter Belt Trees for Community | NRM | PLNT | |
| 23 | Along the coast Line Plantation of Coastal Shelter Belt Trees for Community | NRM | PLNT | |
| 24 | Along the coast Block Plantation of Farm Forestry Trees for Community | NRM | PLNT | |
| 25 | Wasteland Block Plantation of Farm Forestry Trees for Community | NRM | PLNT | |
| 26 | Along the coast Block Plantation of Forestry Trees for Community | NRM | PLNT | |
| 27 | Block Plantation of Forestry Trees in Fields for Community | NRM | PLNT | |
| 28 | Wasteland Block Plantation of Sericulture Trees for Community | NRM | PLNT | |
| 29 | Block Plantation of Bio-drainage Trees in<br>Government building premises for Community | NRM | Drainage | Water |
| 30 | Block Plantation of Bio-drainage Trees in fields for Community | NRM | Drainage | Water |
| 31 | Block Plantation of Bio-drainage trees in Wastelands for community | NRM | Drainage | Water |
| 32 | Along the coast Afforestation using forestry Trees for Community | NRM | PLNT | |

| | | | | |
|---|---|---|---|---|
| 33 | Afforestation of wastelands using Forestry trees for individuals | NRM | PLNT | |
| 34 | Construction of Earthen Gully Plugs for Community | NRM | SWC | Water |
| 35 | Construction of Stone boulder Gully Plugs for Community | NRM | SWC | Water |
| 36 | Raising of Nursery for Community | NRM | PLNT | |
| 37 | Construction of Mini Percolation Tank for Community | NRM | SWC | Water |
| 38 | Construction of Community Water Harvesting Ponds | NRM | SWC | Water |
| 39 | Construction of Gravel Road Roads for Community | Non-NRM | | |
| 40 | Construction of Mitti Murram Roads for Community | Non-NRM | | |
| 41 | Construction of Sand filter for borewell recharge for Community | NRM | GWR | Water |
| 42 | Construction of Sand filter for open well recharge for Community | NRM | GWR | Water |
| 43 | Construction of Sand filter for open well recharge for Groups | NRM | GWR | Water |
| 44 | Construction of Wire crate (gabion) Spur for Community | NRM | SWC | water |
| 45 | Construction of Stone Spur for Community | NRM | SWC | water |
| 46 | Construction of Earthen Spur for Community | NRM | SWC | Water |
| 47 | Construction of Staggered Trench for Community | NRM | SWC | Water |
| 48 | Construction of Continuous Contour Trench for Community | NRM | SWC | Water |
| 49 | Construction of Water Absorption Trench for Community | NRM | SWC | Water |
| 50 | Construction of Underground Dykes for Community | NRM | GWR | Water |
| 51 | Construction of Embankment for community | Non-NRM | | |